


### ಉಪಯುಕ್ತ ಲೇಖನ

‘ಪರೀಕ್ಷೆ ಎಂಬ ಮಹಾಜ್ವರ’, ನಡಹಳ್ಳಿ ವಸಂತ್ ಅವರ ಮುಖಪುಟ ಲೇಖನ (ಸುಧಾ, ಜುಲೈ 6) ಮಕ್ಕಳಿಗೆ, ಪೋಷಕರಿಗೆ ಅತ್ಯಂತ ಉಪಯುಕ್ತವಾಗಿದೆ. ಮಕ್ಕಳು ಕೊನೆ ಗಳಿಗೆಯಲ್ಲಿ ಪರೀಕ್ಷೆ ತಯಾರಿ ನಡೆಸಿ ಭಯ ಪಟ್ಟುಕೊಂಡೇ ಶಾಲೆಗೆ ಹೋಗುವ ಬದಲು ಮೊದಲಿನಿಂದಲೇ ಅಭ್ಯಾಸ ಮಾಡಿದರೆ ಯಾವ ಭಯವೂ ಇರುವುದಿಲ್ಲ. ಪೋಷಕರೂ ಅಷ್ಟೆ. ತಮ್ಮ ಮಕ್ಕಳ ಮೇಲೆ ಒತ್ತಡ ಹೇರದೇ ಇದ್ದರೆ ಮಕ್ಕಳು ಧೈರ್ಯವಾಗಿ ಪರೀಕ್ಷೆ ಎದುರಿಸಲು ಸಾಧ್ಯ.

—ರಮ್ಯಾ ಬೆಳ್ಳಾವೆ ಉಡುಪಿ, ಸು.ವಿಜಯಲಕ್ಷ್ಮಿ ಶಿವಮೊಗ್ಗ, ಬಿ.ಎಂ. ಶಿವಲಿಂಗೇಗೌಡ ಬೇವಿನಹಳ್ಳಿ, ಪಿ.ಗೋವಿಂದರಾಜು ಶಿವಮೊಗ್ಗ, ಧರ್ಮೇಂದ್ರ ದೊಡ್ಡಮಗ್ಗೆ, ಪುಷ್ಪಾ ಶ್ರೀರಾಮ್ ಬೆಂಗಳೂರು, ಬಂಟ್ವಾಳ ಸೂರ್ಯನಾರಾಯಣರಾವ್ ಮಂಡ್ಯ, ಮಧುರಾ ಸುಬ್ರಹ್ಮಣ್ಯ ಬೆಂಗಳೂರು, ಧರ್ಮಾನಂದ ಶಿರ್ವ

### ಸಮಯೋಚಿತ ಬರಹ

‘ನಿಮ್ಮೊಡನೆ’ಯಲ್ಲಿ ‘ವೈದ್ಯರನ್ನು ನಿಯಂತ್ರಿಸುವುದು ಹೇಗೆ?’ (ಬಿ.ಎಂ. ಹನೀಫ್) ಬರಹ ಸಮಯೋಚಿತ. ಹೆಚ್ಚಿನ ವೈದ್ಯ ಕಾಲೇಜುಗಳು ಮತ್ತು ಖಾಸಗಿ ಆಸ್ಪತ್ರೆಗಳನ್ನು ಅನೇಕ ರಾಜಕಾರಣಿಗಳೇ ಹೊಂದಿದ್ದಾರೆ. ಹಾಗಾಗಿ ಅವ್ಯವಸ್ಥೆ ಸರಿಪಡಿಸುವುದು ಅಷ್ಟು ಸುಲಭ ಅಲ್ಲ. ಸರ್ಕಾರಿ ನೌಕರರು ಮತ್ತು ಜನಪ್ರತಿನಿಧಿಗಳು ಸರ್ಕಾರಿ ಆಸ್ಪತ್ರೆಯಲ್ಲೇ ಚಿಕಿತ್ಸೆ ಪಡೆಯಬೇಕೆಂಬ ಕಠಿಣ ಕಾನೂನು ಬಂದರೆ ಎಲ್ಲವೂ ತಾನೇ ತಾನಾಗಿ ಸುಧಾರಿಸುತ್ತದೆ. ಜೊತೆಗೆ ಸರ್ಕಾರಿ ನೌಕರರ ಮಕ್ಕಳೂ, ಶಾಸಕ ಸಚಿವರ ಮಕ್ಕಳೂ ಸಹ ಸರ್ಕಾರಿ ಶಾಲೆಗೆ ಕಡ್ಡಾಯವಾಗಿ ಸೇರಬೇಕು ಎಂಬ ಕಾನೂನು ತಂದರೆ ಸರ್ಕಾರಿ ಶಾಲೆಗಳು ಅಚ್ಚುಕಟ್ಟಾಗುತ್ತವೆ ಮತ್ತು ಕನ್ನಡ ಭಾಷೆ ಬೆಳೆಯುತ್ತದೆ. ಆದರೆ ಇಂಥಾ ಇಚ್ಛಾಶಕ್ತಿ ನಮ್ಮ ಸರ್ಕಾರಕ್ಕಿದೆಯಾ?

—ಪದ್ಮಾ ಕೃಷ್ಣಮೂರ್ತಿ ತುಮಕೂರು, ಶ್ರೀನಾಥ್ ಕೊನೇಟಿ ಬೆಂಗಳೂರು, ಎಸ್. ಲಕ್ಷ್ಮೀನರಸಿಂಹ ಚಾಮರಾಜನಗರ, ಎಂ.ಮೃತ್ಯುಂಜಯಪ್ಪ ಚಿತ್ರದುರ್ಗ, ಗಾಣಧಾಳು ರಾಮಣ್ಣ ಚಿತ್ರದುರ್ಗ, ಮಹಾವೀರ ಕಾಸರ ಶಿವಮೊಗ್ಗ, ಮುಕುಂದ ಹೆರಕಲ್ಲ ಕಲಬುರಗಿ, ಬಿ.ಎಸ್.ಎನ್. ರಾವ್ ಮಂಡ್ಯ

### ಆತ್ಮಾವಲೋಕನ ಮಾಡಿಕೊಳ್ಳಿ

‘ಗಂಡು ಮಗುವಿನ ಸಂಭ್ರಮ’ (ವೇದಾವತಿ ಎಂ.) ಲೇಖನ ಚಿಂತನಾರ್ಹ. ಗಂಡು ಮಗುವೇ ಬೇಕು ಎಂದು ಹಂಬಲಿಸುವ ಮಂದಿ ಈ ಲೇಖನ ಓದಿ ಆತ್ಮಾವಲೋಕನ ಮಾಡಿಕೊಳ್ಳಬೇಕು.

—ಮೀನಾಕ್ಷಿ ರಾಮಗುಂಡಿ ಬೈಲಹೊಂಗಲ

### ಸಕಾಲಿಕ ವಿಚಾರ

‘ವೈದ್ಯ ಗಂಡೂ ಹೌದು, ಹೆಣ್ಣೂ ಹೌದು’ (ಡಾ.ಕೆ.ಎಸ್. ಪವಿತ್ರ) ಲೇಖನದಲ್ಲಿ ಮಹಿಳೆಯ ಭಾವನಾತ್ಮಕ ಬಲ ಹಾಗೂ ಪುರುಷನ ಪ್ರಾಯೋಗಿಕತೆಯ ಸಾಮರ್ಥ್ಯಗಳ ಕುರಿತ ವಿಚಾರ ಮಂಡನೆಯಾಗಿದ್ದು ಬರಹ ಸಕಾಲಿಕವಾಗಿದೆ. ವೈದ್ಯ ದಿನಾಚರಣೆಯ ಹಿನ್ನೆಲೆಯೂ ಲೇಖನದ ಬೆನ್ನಿಗಿದೆ.

—ರಾಜಶೇಖರ ಹಾದಿಮನಿ ಧಾರವಾಡ

### ಮಾರ್ಮಿಕ ಕಥೆ

ಕಥೆ ‘ಪ್ರೀತಿಯ ಕಡಲಿಗೆ ಹಂಬಲಿಸಿದೆ ಮನ’ (ಡಾ.ಪದ್ಮಿನಿ ನಾಗರಾಜು) ಮಾರ್ಮಿಕವಾಗಿದೆ. ಪತ್ನಿಯನ್ನು ಕಳೆದು ಕೊಂಡ ವಿಧುರನೊಬ್ಬನ ಮಾನಸಿಕ ತುಮುಲಗಳ ಹಂದರ ಈ ಕಥೆಯಲ್ಲಿದೆ.

— ಪ.ಚಂದ್ರಕುಮಾರ ಗೌನಹಳ್ಳಿ, ಎಸ್.ವಿಜಯಕುಮಾರಿ ಬೆಂಗಳೂರು, ಕೆ.ಪಿ. ರಾಮಗುಂಡಿ ಬೈಲಹೊಂಗಲ

### ಶಬ್ದ–ವಾಕ್ಯಗಳ ಜುಗಲ್‌ಬಂದಿ

‘ಮಲೆನಾಡಿನ ಮುಂಗಾರು’ ಪ್ರಬಂಧ (ದಿವ್ಯಾ ಉರಾಳ್) ಓದಿ ಬೆರಗಾದೆ. ಮಲೆನಾಡಿನ ಮುಂಗಾರು ಮಳೆಯ ಅನುಭವವನ್ನು ಲೇಖಕಿ ಕಟ್ಟಿ ಕೊಟ್ಟ ಹೊಸ ತಾಜಾತನ ಖುಷಿ ಕೊಟ್ಟಿತು. ಹಾರದಲ್ಲಿ ಮುತ್ತು ಪೋಣಿಸಿದಂತೆ, ಪ್ರಬಂಧದಲ್ಲಿ ಪದಗಳ ಬಳಕೆ ನವಿರಾದ ಅನುಭವ ನೀಡಿತು.

—ವೆಂಕಟೇಶ ಮುದಗಲ್ ಕಲಬುರಗಿ, ಸವಿತಾ ಮಂಜುನಾಥ್ ಬೆಂಗಳೂರು, ಹೇಮಾ ಸುಬ್ರಹ್ಮಣ್ಯ ಆಗುಂಬೆ, ಕೊಹಿಮ ಬಸರಕೋಡು

### ಹಾಸ್ಯ ಚೆನ್ನಾಗಿದೆ

‘ಇಲಿಗಳು ಸಾರ್ ಇಲಿಗಳು’ (ಕಿರಣ್‌ಕುಮಾರ್ ಕೆ.ಆರ್.) ಹಾಸ್ಯ ಬರಹ ಬಹಳ ಚೆನ್ನಾಗಿದೆ.

—ಲಲಿತಾ ಅಂಬಾಗಿಲು ಉಪ್ಪುಂದ, ಬಾಳ್ಳುಪೇಟೆ ನೀಲಕಂಠಪ್ಪ ಹಾಸನ

### ಅಭೂತಪೂರ್ವ ಯಶಸ್ಸು

ಆರೋಗ್ಯ ಲೇಖನ ‘ಗಂಭೀರ ಕಾಯಿಲೆಗಳಿಗೆ ಹೋಮಿಯೋಪತಿ ಪರಿಹಾರ’ (ಉಮಾ ಅನಂತ್) ಮಾಹಿತಿಪೂರ್ಣ. ಹೋಮಿಯೋಪತಿ ತಜ್ಞ ಡಾ.ರುದ್ರೇಶ್ ಅವರು ತಮ್ಮ ಚಿಕಿತ್ಸೆಯಿಂದ ಹಲವಾರು ಅಪರೂಪದ ಕಾಯಿಲೆಗಳನ್ನು ಗುಣಪಡಿಸಿ ಅಭೂತಪೂರ್ವ ಯಶಸ್ಸು ಗಳಿಸಿದ್ದಾರೆ. ನಾನೂ ಅವರ ಬಳಿ ಚಿಕಿತ್ಸೆ ಪಡೆದು ಗುಣಮುಖನಾಗಿದ್ದೇನೆ. ಇಂಥ ವೈದ್ಯರು ನೂರಲ್ಲ, ಸಾವಿರ ವರ್ಷ ಬಾಳಲಿ.

—ನಾರಾಯಣಯಾಜಿ ಶಿರಾಲಿ

### ಅರ್ಥಪೂರ್ಣ ಕಥೆ

‘ಎಳೆಯರ ಅಂಗಳ’ದಲ್ಲಿ ‘ರೈತ ಮತ್ತು ದೇವರು’ ಕಥೆ (ಮುರಳೀಧರ ಕುಲಕರ್ಣಿ) ಕಥೆ ಅರ್ಥಪೂರ್ಣವಾಗಿದೆ.

—ಸುಂದರ್ ಬೆಂಗಳೂರು

### ಲೇಖನ ಆಹ್ವಾನ

ಸಂಗೀತ ಬ್ರಹ್ಮ ಜಿ.ಕೆ. ವೆಂಕಟೇಶ್ ಅವರ ಸವಿನೆನಪಿಗಾಗಿ ಬೆಂಗಳೂರಿನ ಶ್ರೀರಾಮಪುರ ದಲ್ಲಿರುವ ಸರ್ವಜ್ಞ ಮಿತ್ರವೃಂದ ಸ್ಮರಣಸಂಚಿಕೆ ಹೊರತರಲು ಉದ್ದೇಶಿಸಿದೆ. ಈ ಸಂಚಿಕೆಗೆ ಲೇಖನ ಬರೆಯುವ ಆಸಕ್ತರು ಜುಲೈ 20ರೊಳಗೆ ಲೇಖನ ಕಳಿಸಬಹುದು.

ವಿವರಕ್ಕೆ: 98453 37006



ಸಂಧಿಲಿನ್
SANDHILIN सन्धिलिन

ಗಂಟು ನೋವು, ಬೆನ್ನು ನೋವು, ಮಾಂಸ ಖಂಡಗಳ ಸೆಳೆತ, ನರ, ವಾತ ಸಂಬಂಧಿ

ನೋವಿಗೆ ಶೀಘ್ರ ಪರಿಣಾಮಕಾರಿ




- ಜಿಡ್ಡು ರಹಿತ 'ಸಂಧಿಲಿನ್' ಎಣ್ಣೆಯನ್ನು ಆಯುರ್ವೇದದ ಋಷಿಮುನಿಪ್ರಣೀತ ಶಾಸ್ತ್ರೋಕ್ತವಾಗಿ, ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿ ತಯಾರಿಸಲಾಗಿದೆ.
- ಇದು ಗಂಟುನೋವು, ಬೆನ್ನುನೋವು, ಉಳುಕು, ಮಾಂಸ ಖಂಡಗಳ ಸೆಳೆತ, ನರ, ವಾತ ಸಂಬಂಧಿ ನೋವುಗಳಿಗೆ ಪರಿಣಾಮಕಾರಿ.
- ತ್ವಚೆಗೆ ಹಿತಕರವಾಗಿದ್ದು ಚರ್ಮ ಅಥವಾ ಬಟ್ಟೆಯ ಮೇಲೆ ಯಾವುದೇ ಜಿಡ್ಡು, ಕಲೆಗಳು ಉಂಟಾಗುವುದಿಲ್ಲ.

ತಯಾರಕರು

SDM AYURVEDA PHARMACY

ISO / GMP CERTIFIED

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಕುತ್ಪಾಡಿ – 574 118, ಉಡುಪಿ ಜಿಲ್ಲೆ, ಕರ್ನಾಟಕ
Ph / Fax: 0820 - 2520852
Email: sdmaph@gmail.com

ಇದು 'SDM ಆಯುರ್ವೇದ ಫಾರ್ಮಸಿ'ಯ ಉತ್ಕೃಷ್ಟ ಗುಣಮಟ್ಟದ ಉತ್ಪನ್ನ